**ಸಾಕ್ಷಿಗೆ ದಿನಾಂಕ 01.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಎಲ್ ಎ ಡಿ ಸಿ ಎಸ್ ಪರ ವಕೀಲರಿಂದ**

ದಿಃ01.09.2018 ರಂದು ಸಂಜೆ 4.30 ರ ಘಟನೆಯ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇವೆ. ದಾಳಿಗೆ ಹೋಗುವ ಮುನ್ನ ಎಸ್.ಪಿ ರವರಿಂದ ಬರವಣಿಗೆ ಪಡೆದಿರುತ್ತೇನೆ. 15 ನಿಮಿಷದಲ್ಲಿ ಮಹಿಳಾ ಪೇದೆಯನ್ನು ಕರೆದುಕೊಂಡು ಇತರೆ ಸ್ಟಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಹೋಗಲು 15 ನಿಮಿಷದ ಪ್ರಕ್ರಿಯೆ ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ನಾವು ಹೋದಾಗ ಸಂಜೆ 6.00 ಗಂಟೆಯಾಗಿದ್ದು ಸಂಜೆ 6.00 ಗಂಟೆಯ ಸಮಯದಲ್ಲಿ ಸ್ಥಳ ಪಂಚನಾಮೆ ಮಾಡಿರುತ್ತೇವೆ. ನಮ್ಮ ಸೆನ್ ಪೊಲೀಸ್ ಠಾಣೆಯಿಂದ ಪುಣಜೂರು ಚೆಕ್ ಪೋಸ್ಟ್ ಗೆ 35 ಕಿ.ಮೀ ಆಗುತ್ತದೆ. ವಾಹನದಲ್ಲಿ ಹೋದರೆ ಸುಮಾರು 30–35 ನಿಮಿಷ ಬೇಕಾಗುತ್ತದೆ. ಸದರಿ ದಿನ ಪುಣಜೂರು ಮೂಲಕ ಸ್ಥಳಕ್ಕೆ ನಾವು ಹೋಗಬೇಕಾದರೆ ರಸ್ತೆ ಕಾಮಗಾರಿ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಹರದನಹಳ್ಳಿ ಯಿಂದ ಪುಣಜೂರಿಗೆ ಹೋಗುವಾಗ ಸುಮಾರು 20 ಕ್ರಾಸ್ ಗಳು ಇವೆ ಎಂದರೆ ಸರಿಯಲ್ಲ. ಗ್ರಾಮಾಂತರ ಪೊಲೀಸ್ ಠಾಣೆಯಿಂದ ಪುಣಜೂರು ಚೆಕ್ ಪೋಸ್ಟ್ ಹೋಗಬೇಕಾದರೆ ಸುಮಾರು ಒಂದೂವರೆ ಗಂಟೆ ಬೇಕು ಎಂದರೆ ಸರಿಯಲ್ಲ. ನಮ್ಮ ವಾಹನದಲ್ಲಿ ಒಂದು ಗಂಟೆಯ ಒಳಗೆ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಪುಣಜನೂರು ಆರ್ ಟಿ ಓ ಚೆಕ್ ಪೋಸ್ಟ್ ನಿಂದ ಮುನೇಶ್ವರ ಕಾಲೋನಿಗೆ ನಡೆದುಕೊಂಡು ಹೋದರೆ 5 ನಿಮಿಷ ಆಗುತ್ತದೆ. ಅಂದಾಜು ಒಂದೂವರೆ ಕಿ.ಮೀ ಆಗಬಹುದು. ನಾವು ಸ್ಥಳಕ್ಕೆ ಹೋದಾಗ ಮುನೇಶ್ವರ ಕಾಲೋನಿ ಸ್ಥಳೀಯರನ್ನು ಪಂಚರಾಗಿ ಮಾಡಿದ್ದೀರಾ ಎಂದರೆ ಸ್ಥಳೀಯರನ್ನೇ ಪಂಚರಾಗಿ ಕರೆದಿರುತ್ತೇವೆ. ಸದರಿ ಪಂಚರು ನಮ್ಮ ಪೊಲೀಸ್ ಠಾಣೆಯ ಸ್ಟಾಕ್ ಪಂಚರು ಎಂದರೆ ಸರಿಯಲ್ಲ. ಆರೋಪಿಯ ಅಕ್ಕಪಕ್ಕದವರ ಮನೆಯವರುನ್ನು ಪಂಚರಾಗಿ ಮಾಡಲು ಏನು ತೊಂದರೆ ಇರಲಿಲ್ಲ ಎಂದರೆ ಸದರಿ ಸ್ಥಳೀಯ ಪಂಚರು ಅವರ ಅಕ್ಕಪಕ್ಕದ ಮನೆಯವರೇ ಎಂದು ನುಡಿಯುತ್ತಾರೆ.

ನಿಪಿ–2 ಫೋಟೋದಲ್ಲಿ ಆರೋಪಿ ನಿಂತಿರುವಂತಹ ಜಮೀನು ಆರೋಪಿಗೆ ಸಂಬಂದಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದಾಗ ಸ್ಥಳವನ್ನು ಮಟ್ಟಾಳೆ ಶೆಡ್ಡನ್ನು ಎಲೆಗಳಿಂದ ಮುಚ್ಚಿದ್ದ ಬಗ್ಗೆ ನಾವು ದಾರಿಯಲ್ಲಿ ಹೋದಾಗ ಕಾಣುತ್ತಿರಲಿಲ್ಲ. ಕಿತ್ತಂತಹ ಗಾಂಜಾವನ್ನು ಬಿಟ್ಟ ಹೂವು ಕಾಯಿ ಗಳನ್ನು ಪ್ರತ್ಯೇಕ ಮಾಡಿಲ್ಲ. ನಾವು ತೆಗೆದುಕೊಂಡು ಹೋದಂತಹ spin ತಕ್ಕಡಿಯಿಂದ ತೂಕ ಮಡಲು ಯಾವುದೇ ಮಾಪನ ಇಲಾಖೆಯಿಂದ ಯಾವುದೇ certificate ನ್ನು ಪಡೆಯಲಿಲ್ಲ. ಆರೋಪಿ ಮನೆಗೆ ಸಂಬಂಧಪಟ್ಟು ಪಂಚಾಯಿತಿಯಿಂದ ಯಾವುದೇ ದಾಖಲೆಯನ್ನು ಪಡೆಯಲಿಲ್ಲ.

ಆರೋಪಿಯನ್ನು ಕೇಳಲಾಗಿ ಅವರ ಮನೆ 20x30 ಚದುರ ಅಡಿ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ನಾನು ಆರೋಪಿಯನ್ನು ಕೇಳಲಿಲ್ಲ, ಅದನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನೋಟೀಸ್ ಮತ್ತು ಪಂಚನಾಮೆಯನ್ನು ಸ್ಥಳದಲ್ಲಿಯೇ ಬರೆದಿರುತ್ತೇವೆ. ಪಂಚರಿಗೆ ಯಾವುದೇ ನೋಟೀಸ್ ನ್ನು ಕೊಟ್ಟಿಲ್ಲ, ಅದನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚರಿಗೆ ಓದಲು, ಬರೆಯಲು ಬರುವುದಿಲ್ಲ ನಾವು ಓದಿ ಅವರಿಗೆ ತಿಳಿಸಿದ್ದನ್ನು ಅರ್ಥ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಠಾಣಾ ದಿನಚರಿಯಲ್ಲಿ ಅನುಮತಿ ಪಡೆದಿದ್ದೇನೆ ಎಂದು ಬರೆದಿದ್ದು ಯಾವ ರೀತಿಯ ಅನುಮತಿಯನ್ನು ಪಡೆದಿರುತ್ತೇನೆ ಎಂದು ನಮೂದಾಗಿಲ್ಲ ಎಂದರೆ ಹೌದು.

ಸಂಜೆ 6.00-7.00 ಗಂಟೆಯ ಸಮಯದಲ್ಲಿ ಪಂಚನಾಮೆ ಬರೆದಂತಹ ಸಮಯದಲ್ಲಿ ಕತ್ತಲಾಗಿತ್ತು ಎಂದರೆ ಸರಿಯಲ್ಲ. ಸ್ಯಾಂಪಲ್ ಗಾಂಜಾವನ್ನು ನಾವು ಜಪ್ತಿ ಮಾಡಿದಾಗ ಸಂಜೆ 6.00 ಗಂಟೆಯಾಗಿತ್ತು. ಮಹಜರ್ ಬರೆದ ನಂತರ ಠಾಣೆಗೆ ರಾತ್ರಿ 8.00 ಗಂಟೆಗೆ ವಾಪಸ್ಸಾಗಿರುತ್ತೇವೆ. ಪಿಎಸ್ ಐ ರವರಿಗೆ ಮಾಲು ಮತ್ತು ಆರೋಪಿಯನ್ನು ಕೊಡುವವರೆಗೆ ಸದರಿ ಸ್ಯಾಂಪಲ್ ಗಾಂಜಾ ನನ್ನ ವಶದಲ್ಲಿತ್ತು. ಆರೋಪಿಯನ್ನು ಸಂಜೆ 6.00 ಗಂಟೆಗೆ ವಶಕ್ಕೆ ಪಡೆದಿರುತ್ತೇವೆ. ಸಂಜೆ 6.00 ಗಂಟೆ ಆದ ಕಾರಣ ಆರೋಪಿಯು ಮಹಿಳೆಯಾದ ಕಾರಣ ವಶಪಡಿಸಿಕೊಳ್ಳಲು ಆಗುವುದಿಲ್ಲ ಎಂದರೆ ನಾವು WPC ಮೂಲಕ ವಶಕ್ಕೆ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಕಾನೂನು ವಿರುದ್ಧವಾಗಿ ನಾನು ಆರೋಪಿಯನ್ನು ವಶಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಮನೆಯ ಬಳಿ ದಾಳಿ ಮಾಡಿಲ್ಲ, ಅವರಿಂದ ಗಾಂಜಾವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ಆರೋಪಿಯಿಂದ ಯಾವುದೇ ಗಾಂಜಾವನ್ನು ವಶಪಡಿಸಿಕೊಳ್ಳದೇ ಇದ್ದರೂ ಸುಳಳ್ಳು ಆರೋಪವನ್ನು ಹೊರಿಸಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಮುದ್ದೆಮಾಲಿಗೂ, ಈಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**